- **ನಿಪ್ಪಲಿನ ರಂಧ್ರದ ಅಳತೆ (ಆಕಾರ):** ನಿಪ್ಪಲಿನ ರಂಧ್ರ ಹಾಲನ್ನು ನಿಧಾನವಾಗಿ ಅಥವಾ ವೇಗವಾಗಿ ಹರಿಸಲು ಅನುಕೂಲ. ಮಗು ಯಾವ ಮಟ್ಟದಲ್ಲಿ ನಿಪ್ಪಲಿನ ಮೂಲಕ ಬರುವ ಹಾಲಿನ ಹರಿವನ್ನು ಕುಡಿಯಲು ಸಾಧ್ಯ ಎಂಬುದನ್ನು ತಜ್ಞರಿಂದ ಸಲಹೆ ಪಡೆಯಿರಿ.




ಎನ್.ಯು.ಕೆ. ನಿಪ್ಪಲ್




ಆರ್ಥೋಡೊಂಟಿಕ್ ನಿಪ್ಪಲ್

10. **ಸುಧಾರಿತ ನಿಪ್ಪಲ್:** ಸೀಳು ತುಟಿ ಮತ್ತು ಅಂಗುಳಿನ ಮಕ್ಕಳಿಗೆ ವಿಶೇಷವಾಗಿ ತಯಾರಿಸಿದ ಬಾಟಲುಗಳು ಮಾರುಕಟ್ಟೆಯಲ್ಲಿ ಲಭ್ಯ. ಇವು ಹಾಲುಣ್ಣಿಸುವ ವಿಶೇಷ ಅವಶ್ಯಕತೆಗಳನ್ನು ಪೂರೈಸುತ್ತವೆ. ಸೀಳು ಅಂಗುಳಗಳಿಗೆ ಪೋಷಣೆ ಮತ್ತು ಪಿಜ್ಯನ್ ಬಾಟಲ್. ಪೋಷಕರು ಬಾಟಲನ್ನು ಎತ್ತಿ ಹಿಡಿದು ಮಗುವಿಗೆ ಹಾಲು ಕುಡಿಸಬೇಕು.



ಉದಾ: ಪಿಜ್ಯನ್ ಬಾಟಲ್



ಹೆಬರ್ ಮ್ಯಾನ್ ಬಾಟಲ್

11. **ಲೋಟದಲ್ಲಿ ಕುಡಿಸುವುದು:** ಅಂಗುಳನ್ನು ಸರಿಪಡಿಸುವ ವೊದಲೇ ಲೋಟದಲ್ಲಿ ಹಾಲು ಕುಡಿಸಲು ಅಭ್ಯಾಸ ಮಾಡಿಸಬೇಕು. ಕೆಲವೊಮ್ಮೆ ಇದರಿಂದ ಶಸ್ತ್ರ ಚಿಕಿತ್ಸೆಯ ನಂತರ ಕಲೆ ಅಥವಾ ವಾಸಿಯಾಗುವಲ್ಲಿ ತೊಂದರೆಯಾಗಬಹುದು. ಗಟ್ಟಿಯಿರುವ ದ್ರವಗಳನ್ನು ಲೋಟದಿಂದ ಕುಡಿಸಲು ಪ್ರಯತ್ನಿಸಬೇಕು. ವೊದ ವೊದಲು ಆರಂಭದ ಆರು ತಿಂಗಳ ಹಂತದಲ್ಲಿ ಹಾಲನ್ನು ಸ್ವಲ್ಪ ಸ್ವಲ್ಪ ಪ್ರಮಾಣವನ್ನುಲೋಟದಲ್ಲಿ ಹಾಕಿಕೊಂಡು ಮಕ್ಕಳಿಗೆ ಅಭ್ಯಾಸ ಮಾಡಿಕೊಳ್ಳಲು ಪ್ರಯತ್ನಿಸಿ



**ಸೀಳು ತುಟಿ ಮತ್ತು /ಅಥವಾ ಅಂಗುಳ ಸಮಸ್ಯಯಿರುವ ಮಕ್ಕಳಿಗೆ ಹಾಲುಣಿಸುವ ತೊಂದರೆಯಿದ್ದಾಗ ಯಾರನ್ನು ಸಂಪರ್ಕಿಸಬೇಕು:**

- **ಮಕ್ಕಳ ತಜ್ಞರು** – ಮಗುವಿನ ಬೆಳವಣಿಗೆಯನ್ನು ಗಮನಿಸುತ್ತಾ ಜೊತೆಗೆ ಬೇರೆ ಯಾವ ವೈದ್ಯರಲ್ಲಿ ತೋರಿಸಬೇಕು ಎಂದು ಸಲಹೆ ಸೂಚನೆ ನೀಡಲು ಸಹಕರಿಸುತ್ತಾರೆ.
- **ಶುಶ್ರೂಕಿಯರ ತಂಡ** – ಮಕ್ಕಳ ಬಗ್ಗೆ ಅನುಭವ ಹೊಂದಿದ ಮತ್ತು ಮಕ್ಕಳ ಪೋಷಣೆಯಲ್ಲಿ ಪ್ರಾವಿಣ್ಯತೆ ಹೊಂದಿದ ನೊಂದಾಣಿತ ಮಕ್ಕಳ ಶಿಶ್ರೋಶಿಕಿಯನ್ನು ಸಂಪರ್ಕಿಸುವುದು .
- **ವಾಕ್–ಭಾಷಾ ತಜ್ಞರು** – ಮಗುವಿನ ವಾಕ್ ಭಾಷಾ ಕೌಶಲ್ಯ ಮತ್ತು ಹಾಲುಣ್ಣಿಸುವಲ್ಲಿ ಸುಧಾರಣೆ ಹೊಂದಲು ಮಾರ್ಗದರ್ಶನ ನೀಡುವುದರಲ್ಲಿ ಅನುಭವ ಹೊಂದಿದ ತಜ್ಞರನ್ನು ಸಂಪರ್ಕಿಸುವುದು.
- **ಸಮಾಜ ಸೇವಕರು** – ಇವರು ಸಾಮಾಜಿಕ ಪರಿಣಿತಿ ಹೊಂದಿದವರು. ಸೀಳು ತುಟಿ ಮತ್ತು ಅಂಗುಳಿನ ಸಮಸ್ಯೆಯಿರುವ ಕುಟುಂಬ ವರ್ಗದವರಿಗೆ ಸಾಮಾಜಿಕ ಹಾಗೂ ಭಾವನಾತ್ಮಕ ಅಂಶಗಳಲ್ಲಿ ಸಾಮಾನ್ಯರಂತೆ ವರ್ತಿಸಲು ಮಾರ್ಗದರ್ಶನ ಮತ್ತು ಸಮಾಲೋಚನೆಯನ್ನು ನೀಡುತ್ತಾರೆ.



**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ನೈಮಿಷಂ ಕ್ಯಾಂಪಸ್, ಮಾನಸಗಂಗೋತ್ರಿ,
ಮೈಸೂರು 570 006
ದೂರವಾಣಿ: 0821–2502000, ಟೋಲ್ ಫ್ರೀ: 18004255218
ಕೆಲಸದ ವೇಳೆ: ಸೋಮವಾರದಿಂದ ಶುಕ್ರವಾರ (9AM–5.30PM)
ವೆಬ್‌ಸೈಟ್: www.aiishmysore.in
ಕೇಂದ್ರ ಸರ್ಕಾರದ ರಜಾದಿನಗಳನ್ನು ಹೊರತು ಪಡಿಸಿ
ಇ ಮೇಲ್: director@aiishmysore.in



# ಸೀಳು ತುಟಿ / ಅಂಗುಳ ಇರುವ ಮಕ್ಕಳ ತಾಯಂದಿರಿಗೆ ಅಥವಾ ಪೋಷಕರಿಗೆ ಹಾಲುಣಿಸುವ ಸಲಹೆಗಳು

## ಸಂವಹನ ನ್ಯೂನತೆ ತಡೆಗಟ್ಟುವಿಕೆಯ ವಿಭಾಗ

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**
ಮಾನಸಗಂಗೋತ್ರಿ, ಮೈಸೂರು 570 006
ದೂರವಾಣಿ: 0821–2502000, ಫ್ಯಾಕ್ಸ್: 0821–2510515
ಇ ಮೇಲ್: director@aiishmysore.in
ವೆಬ್‌ಸೈಟ್: www.aiishmysore.in

ಮಗು( ಶಿಶು)ವು ಸ್ತನಪಾನ (ಹಾಲುಕುಡಿಯುವುದು) ಮಾಡುವುದು ಒಂದು ಪ್ರಮುಖವಾದ ಕೌಶಲ್ಯವಾಗಿದೆ. ಮಗುವಿಗೆ ಒಳ್ಳೆಯ ಪೋಷಣೆ ಅವಶ್ಯಕ. ಸೀಳು ತುಟಿ ಮತ್ತು/ ಅಥವಾ ಅಂಗುಳವನ್ನು ಹೊಂದಿದ ಮಗು ಜನಿಸಿದಾಗ ಅದಕ್ಕೆ ತಾಯಿಯ ಹಾಲು ಕುಡಿಸುವುದು ಅಥವಾ ಬಾಟಲಿನಲ್ಲಿ ಹಾಲು ಕುಡಿಸುವುದು ಒಂದು ಕಷ್ಟ ಸಾಧನೆಯೇ ಸರಿ. ಕೆಲವೊಂದು ಹಾಲುಣಿಸುವ ವಿಧಾನ ಮತ್ತು ಹೊಂದಾಣಿಕೆಯು ಸೀಳು ತುಟಿ ಮತ್ತು ಅಂಗುಳ ಇರುವ ಮಗುವಿಗೆ ಹಾಲುಕುಡಿಯುವ ಅನುಭವವನ್ನು ಫಲಕಾರಿ ಮಾಡುವುದು.

**ಸೀಳು ತುಟಿ/ ಅಂಗುಳಿನ ಮಕ್ಕಳು ಎದುರಿಸುವ ತೊಂದರೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:**


**ಸೀಳು ತುಟಿ ಮಾತ್ರ:** ಸಾಮಾನ್ಯವಾಗಿ ಸೀಳುದುಟಿಯಿರುವ ಮಕ್ಕಳಲ್ಲಿ ಆಹಾರ ಸೇವಿಸುವ ಪ್ರಮುಖ ತೊಂದರೆಗಳು ಇರುವುದಿಲ್ಲ. ಈ ರೀತಿಯ ಮಕ್ಕಳಿಗೆ ಸುಲಭವಾಗಿ ಸ್ತನಪಾನ ಮಾಡಬಹುದು. ಹಾಗೂ ಕೆಲವು ಮಕ್ಕಳಲ್ಲಿ ಮೊದಲ ಬಾರಿ ಸ್ತನಪಾನ ಮಾಡುವಾಗ ಕಷ್ಟವಾಗುವುದು ಸಹಜ. (ಮೊಲೆಹಿಡಿಯುವುದು ಕಷ್ಟ)



ಸೀಳು ತುಟಿ

**ಸೀಳು ತುಟಿ ಮತ್ತು ಅಂಗುಳ:**


ಸೀಳು ತುಟಿ ಮತ್ತು ಅಂಗುಳ ಸಮಸ್ಯೆಯಿರುವಾಗ ಮಕ್ಕಳು ಹಾಲು ಕುಡಿಯುವುದು ಕಷ್ಟ.ಆದ್ದರಿಂದ ಈ ಮಕ್ಕಳಿಗೆ ಸ್ತನಪಾನ ಅಥವಾ ಬಾಟಲಿನಿಂದ ಅವುಗಳಿಗೆ ಬೇಕಾಗುವಷ್ಟು (ಅವರಿಗೆ ಅವಶ್ಯವಿರುವಷ್ಟು) ಹಾಲು ಕುಡಿಸುವುದು ಕಷ್ಟ.



- ಹಾಲು ಕುಡಿಸುವಾಗ ಆಗುವ ತೊಂದರೆಗಳು– ಮಗುವಿನಲ್ಲಿ ಬಾಯಿಯ ಮೇಲ್ಭಾಗ ಸಂಪೂರ್ಣವಾಗಿ ರಚನೆಯಾಗದ ಕಾರಣ ಹಾಲು ಕುಡಿಯಲು ಕಷ್ಟವಾಗುತ್ತದೆ.
- ಇರಬಹುದಾದ ಇತರ ತೊಂದರೆಗಳು: ಹಾಲು ಮೂಗಿನಿಂದ ಹೊರಬರುವುದು, ಸಿಕ್ಕಿ ಹಾಕಿಕೊಂಡಂತೆ ಆಗುವುದು, ಗಂಟಲಿನಿಂದ ಕೆಳಗೆ ಇಳಿಯದಿರುವುದು.
- ಕಿವಿ ಸೋಂಕು ಮತ್ತು ಕಿವುಡುತನ: ಗಂಟಲು ಮತ್ತು ಮಧ್ಯದ ಕಿವಿಯ ನಡುವೆ ಇರುವ ನಾಳದ ಕಾರ್ಯ ನಿರ್ವಹಿಸುವುದಿಲ್ಲ. ಸೀಳು ಅಂಗುಳಿನ ಕಾರಣದಿಂದ ಹಾಲು ಮಧ್ಯ ಕಿವಿ ಜಾಗವನ್ನು ಸೇರುವುದರ ಪರಿಣಾಮವಾಗಿ ಪುನರಾವರ್ತಿತ ಸೋಂಕುಗಳು ಕಿವುಡುತನಕ್ಕೆ ಕಾರಣವಾಗಿರಬಹುದು.
- ವಾಕ್ ಮತ್ತು ಭಾಷಾ ವಿಳಂಬ: ಬಾಯಿಯ ಅಂಗುಳ ಮತ್ತು ತುಟಿಯಲ್ಲಿ ಸೀಳುವುಂಟಾಗಿರುವುದರಿಂದ ಸ್ನಾಯುಗಳ ಕಾರ್ಯ ಕುಂಟಿತವಾಗುತ್ತದೆ. ಇದರಿಂದಾಗಿ ಮಾತಿನಲ್ಲಿ ಅಸಹಜತೆವುಂಟಾಗುತ್ತದೆ. ಆದ್ದರಿಂದ ವಾಕ್ ವಿಳಂಬಗೊಳ್ಳುತ್ತದೆ ಅಥವಾ ಅಸಹಜತೆಯನ್ನು ಪಡೆಯುತ್ತದೆ. ಸೀಳುದುಟಿಯಿರುವ ಮಕ್ಕಳಲ್ಲಿ ಕೆಲವು ಮಾತಿನ ತೊಂದರೆಗಳಿದ್ದರೆ, ಸೀಳು ಅಂಗುಳ ಇರುವ ಮಕ್ಕಳಲ್ಲಿ ಇದು ಹೆಚ್ಚಾಗಿರುತ್ತದೆ. ಅಂದಾಜು ೧೫–೨೦ ಶೇಕಡವಾರು. ಸೀಳು ಅಂಗುಳಯಿರುವ ಮಕ್ಕಳಲ್ಲಿ ಸೀಳು ಅಂಗುಳ ಸರಿಪಡಿಸಿದ ನಂತರವು ಸಹ ಮಾತಾನಾಡುವ ತೊಂದರೆಗಳು ಇದ್ದೇ ಇರುತ್ತವೆ. ಸಾಮಾನ್ಯವಾಗಿ ಇಂತಹ ಮಕ್ಕಳು ಮೂಗಿನಲ್ಲಿ ಮಾತಾನಾಡಿದ ಹಾಗೆ ಕೇಳಿಸುತ್ತದೆ.
- ದಂತ ಬಾದೆಗಳು: ಹಲ್ಲುಗಳು ಸಹಜವಾಗಿ ಹುಟ್ಟಿಕೊಳ್ಳುವುದಿಲ್ಲ ಮತ್ತು ದಂತ ಯೋಜಕ ಚಿಕಿತ್ಸೆ ಸಾಮಾನ್ಯವಾಗಿ ಅಣತ್ಯವಿರುತ್ತದೆ.


**ಸೀಳು ತುಟಿ ಮತ್ತು /ಅಥವಾ ಅಂಗುಳಿನ ಸಮಸ್ಯೆಯಿರುವ ಮಕ್ಕಳಿಗೆ ಉಣ್ಣಿಸಲು (ತಿನ್ನಿಸಲು) ಇರುವ ಮಾರ್ಗಸೂಚಿಗಳು:**

1. ಮಗುವನ್ನು ಹಿಡಿದುಕೊಳ್ಳುವ ರೀತಿ: ಸೀಳು ತುಟಿ ಯಿರುವ ಮಕ್ಕಳಿಗೆ ಚೆನ್ನಾಗಿ ಹಾಲು ಕುಡಿಸಬೇಕಾದರೆ ನೇರವಾಗಿ ಅಥವಾ ಸ್ವಲ್ಪ ಎತ್ತಿದ ರೀತಿಯಲ್ಲಿ ಹಿಡಿಯುವುದು




ಸೀಳು ತುಟಿ ಅಥವಾ ಅಂಗುಳಿನ ಸಮಸ್ಯಯಿರುವ ಮಗುವಿಗೆ ಹಾಲುಣ್ಣಿಸುವುದು

2. **ನಿಪ್ಪಲ್ ಹಿಡಿದುಕೊಳ್ಳುವ ರೀತಿ :** ನಿಪ್ಪಲನ್ನು ಸೀಳು ಇಲ್ಲದ ಅಂಗುಳಿನ ಕೆಳಗೆ ಹಿಡಿಯಬೇಕು
3. **ಹಾಲುಣ್ಣಿಸುವ ರೀತಿ:** ಆಗಾಗ ಸ್ವಲ್ಪ ಸ್ವಲ್ಪವಾಗಿ ಕುಡಿಸಬೇಕು ಹಾಗೂ ಜಾಗರೂಕತೆಯಿಂದ ಹಾಲು ಹರಿಯುವುದನ್ನು ನಿಯಂತ್ರಿಸಬೇಕು. ಮಗು ಹಾಲನ್ನು ಕುಡಿಯಲು ಆರಂಭಿಸಿದಾಗ ಸ್ವಲ್ಪ ಬಾಟಲನ್ನು ಒತ್ತಿ ಹಿಡಿಯಬೇಕು. ನಂತರ ಮಗುವಿಗೆ ಬೇಡ ಎನ್ನಿಸಿದಾಗ ನಿಲ್ಲಿಸಬೇಕು
4. **ಮೇಲು ಹಾಲು ಉಣ್ಣಿಸುವುದು:** ಮಗುವಿಗೆ ಹಾಲುಣ್ಣಿಸುವಾಗ, ಮಗುವಿನ ಬಾಯಿಗೆ ನಿಪ್ಪಲ್ ಇಡುವಾಗ ಕೈ ಅಥವಾ ಬೆರಳನ್ನು ಹಿಡಿದುಕೊಂಡು ಕುಡಿಸಬೇಕು.
5. **ಹಾಲು ಮೂಗಿನಲ್ಲಿ ಹೋಗದಂತೆ ತಡೆಗಟ್ಟುವುದು :** ಮೂಗಿನಿಂದ ಹಾಲು ಹೊರ ಬಂದಾಗ ಮಗುವನ್ನು ನೇರವಾಗಿ ಕೂರಿಸಿಕೊಳ್ಳಿ. ನಂತರ ಹಾಲು ಹೊಟ್ಟೆಗೆ ಹೋಗುವಂತೆ ಮಾಡಿ
6. **ಹೊರ ಪೋಷಣೆ:** ಹಾಲು ಕುಡಿಸಿ ಆದ ಮೇಲೆ ಸೀಳು ತುಟಿಯ ಸುತ್ತ ಒದ್ದೆ ಬಟ್ಟೆ ಬಳಸಿ ಸ್ವಚ್ಛಗೊಳಿಸಿ
7. **ಗಾಳಿ ನುಂಗುವುದನ್ನು ತಡೆಗಟ್ಟಿ:** ಮಗುವಿಗೆ ತೇಗುವಂತೆ ಮಾಡಿ ಸೀಳು ತುಟಿ ಅಂಗುಳ ಇರುವ ಮಕ್ಕಳು ಬೇರೆ ಮಕ್ಕಳಿಗಿಂತ ಹೆಚ್ಚು ಗಾಳಿ ಸೇವಿಸುವರು



8. **ಸ್ತನ ಪಾನ :** ಎದೆ ಹಾಲು ಉಣ್ಣಿಸುವುದು ಫಲಕಾರಿಯಾಗದಿದ್ದಾಗ ಹಾಲು ಪಡೆಯಲು ಹಾಲು ಒತ್ತುವ ಸಾಧನವನ್ನು ಬಳಸಿ. ನಂತರ ಆ ಹಾಲನ್ನು ಬಾಟಲಿನಲ್ಲಿ ಹಾಕಿ ಕುಡಿಸಿ



ಹಾಲು ಕುಡಿಸುವ ಸಾಧನ

9. **ಕುಡಿಸುವ ಸಾಧನಗಳು**

**ನಿಪ್ಪಲ್:** ಮಗುವಿಗೆ ಬೇರೆ ಬೇರೆ ವಿಶೇಷ ರೀತಿಯ ಹೆಚ್ಚಿನ ಪ್ರಮಾಣದಲ್ಲಿ ಹಾಲು ಕುಡಿಯಲು ವಿಶೇಷ ರೀತಿಯ ನಿಪ್ಪಲ್‌ಗಳು ಈಗ ಲಭ್ಯ. ಅವು ವಿವಿಧ ರೀತಿಯ ಗಾತ್ರ, ಆಕಾರ ಮತ್ತು ವಿನ್ಯಾಸವನ್ನು ಹೊಂದಿರುತ್ತವೆ. ಹಾಲು ಸುಲಭವಾಗಿ ಹೊರಬರಲು ಅನೇಕ ರಂಧ್ರಗಳನ್ನು ಹೊಂದಿರುತ್ತವೆ.

- ನಿಪ್ಪಲ್ ಆಕಾರ: ಮುಖ್ಯವಾಗಿ ಎರಡು ಆಕಾರಗಳಲ್ಲಿ ಲಭ್ಯ. ನೇರವಾಗಿರುವ, ಸ್ಟಾಂಡರ್ಡ್ ನಿಪ್ಪಲ್ ಮತ್ತು ಅಗಲವಾಗಿ ಚಪ್ಪಟೆಯಾಗಿರುವ "ಎನ್.ಯು.ಕೆ" ಅಥವಾ "ಆರ್ಥೋಡೊಂಟಿಕ್" ಸುದಂತ ಯೋಜಕ ನಿಪ್ಪಲ್
- ನಿಪ್ಪಲಿನ ಉದ್ದಳತೆ: ನಿಪ್ಪಲ್, ಮಗು ನಾಲಿಗೆಯಿಂದ ಒತ್ತಿ ಹೀರಲು ಸಾಧ್ಯವಾಗುವಷ್ಟು ಉದ್ದವಾಗಿರಬೇಕು
- ನಿಪ್ಪಲಿನ ಮೃದುತ್ವ: ಮೃದುವಾದ ನಿಪ್ಪಲ್ ಇದ್ದಲ್ಲಿ ಹಾಲು ಬೇಗ ಹೊರ ಬರುವುದು.